ವಾರ್ಡ್ ಸಭೆ - 05/03/2022

ಸಂಬಂಧಿತ ಅಧಿಕಾರಿಗಳು

01 Aravinda. R [JHI]
02 Manjunath. D [Marshal]
03 VINAY K.S AE / BESCOM
aee520.work@gmail.com
4 SANJEEV KUMAR. (Supervisors)
5) Dinesh. N. Asst-Sub Inspector Traffic PS
Maddivala. Traffic P.S
mail id: diradine1974@gmail.com
Dharaneshkumar. H.B, HC-7979-
Naveen.S AE BWSSB
aeese3@bwssb.gov.in
C. Narasimhulu Supervisor B.B.M.P. 173.
6 P. Rama murthy
Vehicle supervisor forest 8050126807.

ಸಂಬಂಧಿತ ಸದಸ್ಯರುಗಳು

Jyothi G. Prabhu
M.A Ponnappa 9886632027
L. V HENRY
T. K. Anantha Murthy
G. S. HOLLA
SYED. HULIKOPPA
MS. A PS

Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ–ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ–173 ದಿನಾಂಕ:05.03.2022 ರಂದು ಮಾರ್ಚ್–2022 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಶಿವಣ್ಣ .ಟಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 05.03.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:–**

1. ಶ್ರೀಮತಿ ಜ್ಯೋತಿ ಪ್ರಭು
2. ಶ್ರೀ ಎಂ.ಎ. ಪೊನ್ನಪ್ಪ
3. ಶ್ರೀ ಎಲ್.ವಿ. ಹೆನ್ರಿ
4. ಶ್ರೀ ಟಿ.ಕೆ. ಅನಂತ ಮೂರ್ತಿ
5. ಶ್ರೀ ಜಿ.ಎಸ್. ಹೊಳ್ಳ

**ಹಾಜರಿದ್ದ ಅಧಿಕಾರಿಗಳು:–**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್–173 ಜಕ್ಕಸಂದ್ರ
2. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ವಿನಯ್ .ಕೆ.ಎಸ್, ಸಹಾಯಕ ಅಭಿಯಂತರರು, ಬೆಸ್ಕಾಂ
4. ಶ್ರೀ ನವೀನ್ .ಎಸ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಶ್ರೀ ದಿನೇಶ್ .ಎನ್, ಎ.ಎಸ್.ಐ, ಸಂಚಾರ ಪೊಲೀಸ್ ಠಾಣೆ, ಮಡಿವಾಳ
6. ಶ್ರೀ ಧರಣೇಶ್ ಕುಮಾರ್ .ಹೆಚ್.ಬಿ, ಹೆಡ್ ಕಾನ್ಸ್‌ಟೇಬಲ್
7. ಶ್ರೀ ಸಯ್ಯದ್ ಎಂ. ಹುಲಿಕೊಪ್ಪ, ಹೆಚ್.ಎಸ್.ಆರ್. ಟ್ರಾಫಿಕ್ ಪೊಲೀಸ್ ಸ್ಟೇಷನ್
8. ಶ್ರೀ ಸಂಜೀವಕುಮಾರ್, ಬಿ.ಬಿ.ಎಂ.ಪಿ. ಸೂಪರ್‌ವೈಸರ್
9. ಶ್ರೀ ಸಿ. ನರಸಿಂಹ, ಸೂಪರ್‌ವೈಸರ್, ಬಿ.ಬಿ.ಎಂ.ಪಿ.
10. ಶ್ರೀ ಪಿ. ರಾಮಮೂರ್ತಿ
11. ಶ್ರೀ ಮಂಜುನಾಥ್ .ಡಿ, ಮಾರ್ಷಲ್

* * * * *

ಶ್ರೀ ಶಿವಣ್ಣ ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀಮತಿ ಜ್ಯೋತಿ ಪ್ರಭು ರವರು ಮಾತನಾಡಿ, ಸರ್ವಿಸ್ ರಸ್ತೆಯಲ್ಲಿ ಹದಗೆಟ್ಟಿರುವ ಬೀದಿ ದೀಪಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ರಸ್ತೆ ದೀಪಗಳು (ವಿದ್ಯುತ್), ಬಿ.ಬಿ.ಎಂ.ಪಿ.**



Scanned by CamScanner

ಶ್ರೀಮತಿ ಜ್ಯೋತಿ ಪ್ರಭು ರವರು ಮಾತನಾಡಿ, 11ನೇ ಮುಖ್ಯರಸ್ತೆ, ಹೆಚ್.ಎಸ್.ಆರ್. 5ನೇ ಸೆಕ್ಟರ್‌ನಲ್ಲಿರುವ ಉದ್ಯಾನವನದ ಮುಂದೆ No Parking ಬೋರ್ಡ್ ಅಳವಡಿಸಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ: ಆರಕ್ಷಕ ನಿರೀಕ್ಷಕರು**
**ಸಂಚಾರ ಪೊಲೀಸ್ ಠಾಣೆ, ಹೆಚ್.ಎಸ್.ಆರ್. ಲೇಔಟ್**

ಶ್ರೀಮತಿ ಜ್ಯೋತಿ ಪ್ರಭು ರವರು ಮಾತನಾಡಿ, ರಸ್ತೆಗೆ ಡಾಂಬರೀಕರಣ ಮಾಡುವ ಉದ್ದೇಶದಿಂದ ರಸ್ತೆಯನ್ನು ಅಗೆದು, ಡೆಬ್ರಿಸ್‌ಗಳನ್ನು ರಸ್ತೆಯ ಬದಿಯಲ್ಲಿಯೇ ಬಿಟ್ಟಿರುತ್ತಾರೆ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುವುದರಿಂದ ಡೆಬ್ರಿಸ್‌ಗಳನ್ನು ಆಗ್ಗಿಂದಾಗ್ಗೆ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಕೋರಂಮಗಲ ಉಪವಿಭಾಗ**

ಶ್ರೀಮತಿ ಜ್ಯೋತಿ ಪ್ರಭು ರವರು ಮಾತನಾಡಿ, ಹೆಚ್.ಎಸ್.ಆರ್. 5ನೇ ಸೆಕ್ಟರ್‌ನ 14ನೇ ಮುಖ್ಯರಸ್ತೆಯು ಬೊಮ್ಮನಹಳ್ಳಿ ವಲಯಕ್ಕೆ ಸೇರಿರುತ್ತದೆ. ಆದರೆ 14ನೇ ಮುಖ್ಯರಸ್ತೆಯು ವಾರ್ಡ್ ನಂ.173 ಜಕ್ಕಸಂದ್ರ, ಹೆಚ್.ಎಸ್.ಆರ್ 5ನೇ ಹಂತದ ಪ್ರಮುಖ ಸಂಪರ್ಕ ರಸ್ತೆಯಾಗಿದ್ದು, ಸದರಿ ರಸ್ತೆಯನ್ನು ನಮ್ಮ ವಾರ್ಡ್–173 ವ್ಯಾಪ್ತಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಗಳು ಉತ್ತರಿಸಿ, ಪ್ರಸ್ತುತ ವಾರ್ಡ್ ಮರುವಿಂಗಡಣೆಗೆ ಸಮಿತಿ ರಚಿಸಲಾಗಿದ್ದು, ತಮ್ಮ ಅಹವಾಲನ್ನು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ನೇರವಾಗಿ ನೀಡಿದ್ದಲ್ಲಿ ಸಮಿತಿಯ ಗಮನಕ್ಕೆ ತಿಳಿಸಿ, ತಮ್ಮ ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರಬಹುದಾಗಿರುವುದಾಗಿ ತಿಳಿಸಲಾಯಿತು.

ಶ್ರೀ ಹೆನ್ರಿ ರವರು ಮಾತನಾಡಿ, ಟೀಚರ್ಸ್ ಕಾಲೋನಿಯಲ್ಲಿನ 5ನೇ ಮುಖ್ಯರಸ್ತೆಯಲ್ಲಿ ಬೀದಿ ವ್ಯಾಪಾರಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಆರೋಗ್ಯ ವೈದ್ಯಾಧಿಕಾರಿಗಳು**
**ಬಿ.ಟಿ.ಎಂ. ಲೇಔಟ್ ವಿಭಾಗ**

ಶ್ರೀ ಹೆನ್ರಿ ರವರು ಮಾತನಾಡಿ, 1ನೇ ಅವೆನ್ಯೂ ಮನೆ ನಂ.88ನಲ್ಲಿ ಪಿ.ಜಿ.ಯನ್ನು ನಡೆಸುತ್ತಿದ್ದು, ಅಲ್ಲಿ ಮೆಟ್ರೋ ಕಾಮಗಾರಿಯ ಕೆಲಸಗಾರರು ಪಿ.ಜಿ.ಯಲ್ಲಿ ನೆಲೆಸಿದ್ದು, ಪಿ.ಜಿ. ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡದೆ, ಮಲಿನ ಉಂಟು ಮಾಡುತ್ತಿರುವುದರಿಂದ ಪಿ.ಜಿ. ಮಾಲಿಕರಿಗೆ ಸ್ವಚ್ಛತೆಯನ್ನು ಕಾಪಾಡುವಂತೆ ಸೂಚನೆ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಆರೋಗ್ಯ ವೈದ್ಯಾಧಿಕಾರಿಗಳು**
**ಬಿ.ಟಿ.ಎಂ. ಲೇಔಟ್ ವಿಭಾಗ**

ಶ್ರೀ ಶ್ರೀನಿವಾಸ್ ಹೊಳ್ಳ ರವರು ಮಾತನಾಡಿ, 11ನೇ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ಶ್ರೀ ಪೊನ್ನಪ್ಪ ರವರು ಮಾತನಾಡಿ, ಅರಣ್ಯ ಇಲಾಖೆ ವತಿಯಿಂದ ವಾರ್ಡ್‌ನಲ್ಲಿ ಸಸಿಗಳನ್ನು ನೆಡುವುದು ಹಾಗೂ ಒಣಗಿರುವ ರೆಂಬೆ–ಕೊಂಬೆಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಅರಣ್ಯಾಧಿಕಾರಿಗಳು
**ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ.**



Scanned by CamScanner

ಶ್ರೀ ಪೊನ್ನಪ್ಪ ರವರು ಮಾತನಾಡಿ, ವಾರ್ಡ್‌ನಲ್ಲಿ ನಿರ್ಮಾಣವಾಗಿರುವ ಬ್ಲ್ಯಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ. ಲೇಔಟ್

ಶ್ರೀ ಪೊನ್ನಪ್ಪ ರವರು ಮಾತನಾಡಿ, 13ನೇ ಮುಖ್ಯರಸ್ತೆಯಿಂದ ಗ್ರೀನ್ ಫ್ಲ್ಯಾಟ್ ಆಸ್ಪತ್ರೆಗೆ ಹಾದು ಹೋಗಲು ಹೊಸದಾಗಿ ಸಂಪರ್ಕ ರಸ್ತೆಯನ್ನು ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ

ಶ್ರೀ ಪೊನ್ನಪ್ಪ ರವರು ಮಾತನಾಡಿ, ಮಳೆ ನೀರು ಹಾದು ಹೋಗುವ ಸಂಪರ್ಕದ ವಿವರವನ್ನು ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ / ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ. ಲೇಔಟ್

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು.
ವಾರ್ಡ್-173 ಜಕ್ಕಸಂದ್ರ

(ಶ್ರೀ ಶಿವಣ್ಣ ಟಿ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-173 ಜಕ್ಕಸಂದ್ರ



Scanned by CamScanner



Scanned by CamScanner



Scanned by CamScanner